APRIL 27, 2024

ALL INDIA RADIO- DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- 18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ; ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ, ಶೇಕಡ 69 ದಶಾಂಶ 2–3 ರಷ್ಟು ಮತದಾನ ದಾಖಲು.
- ಶೇಕಡ 81 ದಶಾಂಶ 4–8 ರಷ್ಟು ದಾಖಲೆ ಮತದಾನದೊಂದಿಗೆ, ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ, ಮತ್ತೆ ಮೊದಲ ಸ್ಥಾನದ ಗರಿಮೆ.
- ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ಉತ್ತರ ಕ್ಷೇತ್ರಗಳಲ್ಲಿ, ಮತದಾನ ಪ್ರಮಾಣದಲ್ಲಿ, ಅಲ್ಪ ಪ್ರಮಾಣದ ಕುಸಿತ.
- ಲೋಕಸಭೆ ಎರಡನೇ ಹಂತದ ಚುನಾವಣೆ; ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕೆ, ಪ್ರಧಾನಮಂತ್ರಿ ಇಂದು ರಾತ್ರಿ ಬೆಳಗಾವಿಗೆ ಆಗಮನ.

<><><>

ಈಗ ವಾರ್ತೆಗಳ ವಿವರ

<><><>

18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಗೆ, ರಾಜ್ಯದ ಮೊದಲ ಹಂತದ ಮತದಾನ ಜರುಗಿದ, ದಕ್ಷಿಣ ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಲ್ಲಿ, ಒಟ್ಟು 247 ಅಭ್ಯರ್ಥಿಗಳ ಭವಿಷ್ಯ ವಿದ್ಯುನ್ಮಾನ ಮತ ಯಂತ್ರಗಳಲ್ಲಿ ಭದ್ರವಾಗಿವೆ. 21 ಮಹಿಳಾ ಅಭ್ಯರ್ಥಿಗಳು, 226 ಪುರುಷ ಅಭ್ಯರ್ಥಿಗಳ ಭವಿಷ್ಯ ಜೂನ್ 4 ಕ್ಕೆ ತಿಳಿಯಲಿದೆ.

<><><>

ರಾಜ್ಯದ ಕೆಲ ಮತಗಟ್ಟೆಗಳಲ್ಲಿ, ಆರಂಭಿಕ ಹಂತದಲ್ಲಿ ವಿದ್ಯುನ್ಮಾನ ಮತಯಂತ್ರಗಳಲ್ಲಿ ತಾಂತ್ರಿಕ ಸಮಸ್ಯೆ ಉದ್ಭವಿಸಿದ ಹಿನ್ನೆಲೆ, ಮತದಾನ ಪ್ರಕ್ರಿಯೆ ನಿಧಾನವಾಯಿತು ಎಂದು, ನಮ್ಮ ಪ್ರತಿನಿಧಿಗಳು ವರದಿ ಮಾಡಿದ್ದಾರೆ.

<><><>

94 ವರ್ಷದ ಏರ್ ಮಾರ್ಷಲ್ ಪಿ.ವಿ. ಅಯ್ಯರ್, ಗಾಲಿ ಕುರ್ಚಿಯಲ್ಲಿ ಬೆಂಗಳೂರಿನ ಕಮ್ಮನಹಳ್ಳಿಯ ಸೆಂಟ್ ಪಾಲ್ ಶಾಲೆ ಮತಗಟ್ಟೆಗೆ ಬಂದು, ತಮ್ಮ ಅಮೂಲ್ಯ ಹಕ್ಕನ್ನು ಚಲಾಯಿಸುವ ಮೂಲಕ, ಇತರರಿಗೆ ಪ್ರೇರಣೆಯಾದರು. ಸಿನೆಮಾ ನಟ–ನಟಿಯರು ಸೇರಿದಂತೆ, ಅನೇಕ ಗಣ್ಯರು ತಮ್ಮ ಮತ ಚಲಾಯಿಸಿ, ಸಾಂಕೇತಿಕವಾಗಿ ತೋರು ಬೆರಳು ಪ್ರದರ್ಶಿಸಿದರು.

<><><>

18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ, ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಶುಕ್ರವಾರ ಜರುಗಿದ ಮೊದಲ ಹಂತದ ಮತದಾನದಲ್ಲಿ, ಚುನಾವಣಾ ಆಯೋಗ ಮಧ್ಯರಾತ್ರಿ ತನ್ನ ಅಧಿಕೃತ ಸಾಮಾಜಿಕ ಜಾಲತಾಣ ಎಕ್ಸ್ ಖಾತೆಯಲ್ಲಿ, ಅಂತಿಮವಾಗಿ ಪ್ರಕಟಿಸಿದ ಅಂದಾಜು ವರದಿ ಪ್ರಕಾರ..

ಒಟ್ಟು, ಶೇಕಡ 69 ದಶಾಂಶ 2–3 ರಷ್ಟು ಮತದಾನ ಅಂತಿಮವಾಗಿ ದಾಖಲಾಗಿದೆ. ಕಳೆದ 2019ರ ಲೋಕಸಭಾ ಚುನಾವಣೆಯಲ್ಲಿ ಶೇಕಡಾವಾರು ಮತದಾನ ಪ್ರಮಾಣ, 68 ದಶಾಂಶ 9–6 ರಷ್ಟು ದಾಖಲಾಗಿತ್ತು.

ಶೇಕಡ 0 ದಶಾಂಶ 2–7 ರಷ್ಟು ಹೆಚ್ಚು ಮತದಾನ ಈ ಬಾರಿ ದಾಖಲಾಗಿದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ, ಈ ಬಾರಿಯ ಮತದಾನ ಪ್ರಮಾಣ ಶೇಕಡಾವಾರು ಲೆಕ್ಕದಲ್ಲಿ ಕೊಂಚ ಹೆಚ್ಚಾಗಿದೆ.

ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಶೇಕಡ 80 ದಶಾಂಶ 5–9 ರಷ್ಟು ಮತದಾನದೊಂದಿಗೆ, ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದ್ದ, ಮಂಡ್ಯ ಲೋಕಸಭಾ ಕ್ಷೇತ್ರ, ಈ ಬಾರಿಯೂ ಅದೇ ಸ್ಥಾನ ಕಾಯ್ದುಕೊಂಡಿದೆ. ಸರಾಸರಿ ಮತದಾನದಲ್ಲಿ ಆಗ ಕೊನೆಯ ಸ್ಥಾನದಲ್ಲಿದ್ದ ಬೆಂಗಳೂರು ದಕ್ಷಿಣ ಈ ಬಾರಿ ಯಥಾಸ್ಥಿತಿಯಲ್ಲಿದೆ.

ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ಉತ್ತರ ಕ್ಷೇತ್ರಗಳಲ್ಲಿ ಮತದಾನದಲ್ಲಿ ಅಲ್ಪ ಪ್ರಮಾಣದ ಕುಸಿತ ಕಂಡಿದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಮತದಾನದಲ್ಲಿ ತುಸು ಏರಿಕೆಯಾಗಿದೆ.

1. ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಶೇಕಡ 76 ದಶಾಂಶ 06 ರಷ್ಟು ಮತದಾನವಾಗಿದೆ. ಕಳೆದ 2019ರ ಲೋಕಸಭೆ ಚುನಾವಣೆಯಲ್ಲಿ, ಶೇಕಡ 76 ದಶಾಂಶ 7 ರಷ್ಟು ಮತದಾನವಾಗಿತ್ತು.

ಹೆಚ್ಚಿನ ಮಾಹಿತಿ ನಮ್ಮ ಜಿಲ್ಲಾ ಪ್ರತಿನಿಧಿ –

ನಿಷ್ಮಿತಾ ಬೇಕಲ್ ಅವರಿಂದ, (49 ಸೆಕೆಂದುಗಳು)

2. ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ, ಶೇಕಡ 73 ದಶಾಂಶ 1–1 ರಷ್ಟು ಮತದಾನ ದಾಖಲಾಗಿದೆ. ಕಳೆದ 2019ರ ಲೋಕಸಭಾ ಚುನಾವಣೆಯಲ್ಲಿ, ಶೇಕಡ 70 ದಶಾಂಶ 80 ಯಷ್ಟು ಮತದಾನವಾಗಿತ್ತು.

ಹೆಚ್ಚಿನ ಮಾಹಿತಿ ನಮ್ಮ ಜಿಲ್ಲಾ ಪ್ರತಿನಿಧಿ – ಚನ್ನಬಸವಯ್ಯ ಅವರಿಂದ,

(48 ಸೆಕೆಂದುಗಳು)

3. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ, 76 ದಶಾಂಶ 5–9 ರಷ್ಟು ಮತದಾನವಾಗಿದೆ. ಕಳೆದ 2019ರ ಲೋಕಸಭಾ ಚುನಾವಣೆಯಲ್ಲಿ, 75 ದಶಾಂಶ 35 ರಷ್ಟು ಮತದಾನ ದಾಖಲಾಗಿತ್ತು.

ಹೆಚ್ಚಿನ ಮಾಹಿತಿ ನಮ್ಮ ಜಿಲ್ಲಾ ಪ್ರತಿನಿಧಿ – ನಾಗೇಶ್ ಸೋಸಲೆ ಅವರಿಂದ,

(48 ಸೆಕೆಂದುಗಳು)

4. ಬೆಂಗಳೂರು ಗ್ರಾಮೀಣ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ, 67 ದಶಾಂಶ 2–9 ರಷ್ಟು, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ, 54 ದಶಾಂಶ 4–2 ರಷ್ಟು, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ 52 ದಶಾಂಶ 8–1 ರಷ್ಟು ಮತದಾನ ದಾಖಲಾಗಿದೆ. ಬೆಂಗಳೂರು ದಕ್ಷಿಣ ಲೋಕಸಭಾ ವ್ಯಾಪ್ತಿಯಲ್ಲಿ 53 ದಶಾಂಶ 15 ರಷ್ಟು ಮತದಾನವಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ವಿದ್ಯುನ್ಮಾನ ಮತಯಂತ್ರ – ಇ.ವಿ.ಎಂ.ಗಳಲ್ಲಿ ದಾಖಲಾಗುವ, ಪ್ರತಿಯೊಂದು ಮತವನ್ನೂ, Voter-verified paper audit trail – ವಿ.ವಿ.ಪ್ಯಾಟ್ ಚೀಟಿಗಳೊಂದಿಗೆ, 100ಕ್ಕೆ 100ರಷ್ಟು ಪರಿಶೀಲಿಸಬೇಕೆಂದು ಕೋರಿ, ಸಲ್ಲಿಸಲಾಗಿದ್ದ ಅರ್ಜಿಯನ್ನು, ಸರ್ವೋಚ್ಚ ನ್ಯಾಯಾಲಯ ವಜಾಗೊಳಿಸಿದೆ.

ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ದೀಪಂಕರ್ ದತ್ತಾ ಅವರನ್ನೊಳಗೊಂಡ ಪೀಠ, ಈ ಮಹತ್ವದ ತೀರ್ಪು ನೀಡಿದೆ.

ಚುನಾವಣಾ ಆಯೋಗ ಒದಗಿಸಿರುವ ತಾಂತ್ರಿಕ ಸ್ಪಷ್ಟೀಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಆದೇಶ ನೀಡುತ್ತಿರುವುದಾಗಿ, ನ್ಯಾಯಪೀಠ ಸ್ಪಷ್ಟ ಪಡಿಸಿದೆ.

ಮತದಾನಕ್ಕೆ ಮತ ಚೀಟಿಗಳನ್ನು ಬಳಸುವ, ಈ ಮೊದಲಿನ ಪದ್ಧತಿಗೇ ಹಿಂತಿರುಗಬೇಕು; ಇ.ವಿ.ಎಂ.–ವಿ.ವಿ.ಪ್ಯಾಟ್ ನಡುವೆ ಸಂಪೂರ್ಣ ಪರಿಶೀಲನೆಗೆ ಅವಕಾಶ ಕಲ್ಪಿಸಬೇಕು; ಹಾಗೂ ಪ್ರತಿಯೊಬ್ಬ ಮತದಾರರಿಗೂ, ತಮ್ಮ ಮತದಾನದ ವಿವರ ಇರುವ, ವಿ.ವಿ.ಪ್ಯಾಟ್ ಚೀಟಿಗಳನ್ನು ನೀಡುವ ವ್ಯವಸ್ಥೆಯಾಗಬೇಕೆಂದು ಸಲ್ಲಿಸಲಾಗಿದ್ದ, ಮನವಿಗಳನ್ನು ಸಹ, ವಜಾಗೊಳಿಸಿರುವುದಾಗಿ, ನ್ಯಾಯಮೂರ್ತಿ ಖನ್ನಾ ತೀರ್ಪಿನಲ್ಲಿ ವಿವರಿಸಿದ್ದಾರೆ.

ಪ್ರತಿ ಮತಕ್ಷೇತ್ರದ ಮೆಮೊರಿ ಸೆಮಿ ಕಂಟ್ರೋಲರ್ ಘಟಕವನ್ನು ಮತಯಂತ್ರದ ತಯಾರಿಕಾ ಇಂಜಿನಿಯರ್‌ಗಳು ಪರಿಶೀಲಿಸಿ ಇಡಬೇಕು. ಚುನಾವಣಾ ಫಲಿತಾಂಶ ಪ್ರಕಟಗೊಂಡ 7 ದಿನಗಳ ಒಳಗೆ ಫಲಿತಾಂಶವನ್ನು ಪ್ರಶ್ನಿಸಿ, ಎರಡನೇ ಹಾಗೂ ಮೂರನೇ ಅಭ್ಯರ್ಥಿ ಮನವಿ ಮಾಡಿದಲ್ಲಿ, ಶುಲ್ಕದೊಂದಿಗೆ ಘಟಕದ ಮಾಹಿತಿಯನ್ನು ಒದಗಿಸಬಹುದಾಗಿದೆ ಎಂದು, ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

<><><>

ಇಂದು ಶನಿವಾರ ರಾತ್ರಿ, ಬೆಳಗಾವಿಗೆ ಆಗಮಿಸಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ 28, ಭಾನುವಾರ, ಬೆಳಗ್ಗೆ 10 ಗಂಟೆಗೆ, ಬಹಿರಂಗ ಸಮಾವೇಶದಲ್ಲಿ ಪಾಲ್ಗೊಂಡು, ತಮ್ಮ ಪಕ್ಷದ ಅಭ್ಯರ್ಥಿಪರ ಮತಯಾಚಿಸಲಿದ್ದಾರೆ.

ಉತ್ತರ ಕನ್ನಡ ಜಿಲ್ಲೆ, ಶಿರಸಿ ತಾಲೂಕಿನ, ಮಾರಿಕಾಂಬಾ ಮೈದಾನದಲ್ಲಿ ಅದೇ ದಿನ ಬೆಳಗ್ಗೆ 11 ಗಂಟೆಗೆ ಪ್ರಧಾನಮಂತ್ರಿ, ಬಹಿರಂಗ ಸಮಾವೇಶವನ್ನುದ್ದೇಶಿಸಿ, ಮಾತನಾಡಲಿದ್ದಾರೆ.

ನಾಳೆ ಭಾನುವಾರ ಸಂಜೆ 5 ಗಂಟೆಗೆ, ವಿಜಯನಗರ ಜಿಲ್ಲೆಯ, ಹೊಸಪೇಟೆ ನಗರಕ್ಕೆ ತೆರಳಲಿರುವ ಪ್ರಧಾನಮಂತ್ರಿ, ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ, ಬಿಜೆಪಿ ಪಕ್ಷದ ಅಭ್ಯರ್ಥಿಪರ ಪ್ರಚಾರ ಕೈಗೊಳ್ಳಲಿದ್ದಾರೆ.

<><><>

ಈ ಮಧ್ಯೆ, ಬಿಜೆಪಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಯಾದಗಿರಿ ಜಿಲ್ಲೆಯ ಸುರಪುರ ವಿಧಾನಸಭಾ ಮೀಸಲು ಕ್ಷೇತ್ರದ, ಉಪ ಚುನಾವಣೆಯ ಬಿಜೆಪಿ ಅಭ್ಯರ್ಥಿ, ನರಸಿಂಹ ನಾಯಕ್ ಮತ್ತು ರಾಯಚೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಜಾ ಅಮರೇಶ್ವರ ನಾಯಕ ಪರ, ಸುರಪುರದಲ್ಲಿ ಮಾರ್ಗ ಪ್ರದರ್ಶನ ನಡೆಸಿ, ಮತ ಯಾಚಿಸಿದರು.

<><><>

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಬಳ್ಳಾರಿಯ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿದ್ದ, ಪ್ರಜಾಧ್ವನಿ ಸಮಾವೇಶದಲ್ಲಿ, ಪಕ್ಷದ ಅಭ್ಯರ್ಥಿ ಇ. ತುಕಾರಾಮ್ ಪರ ಮತಯಾಚನೆ ಮಾಡಿದರು.

ಪರಿಶಿಷ್ಟ ಪಂಗಡ ಅಭ್ಯರ್ಥಿಗೆ ಮೀಸಲಾದ, ಬಳ್ಳಾರಿ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನೀಲನಕ್ಷೆ ರೂಪಿಸಿದ್ದಾಗಿ ತಿಳಿಸಿದ ರಾಹುಲ್ ಅವರು, ಬಳ್ಳಾರಿ ಜೀನ್ಸ್ ಪಾರ್ಕ್ ತಮ್ಮ ಕನಸು ಎಂದರು.

<><><>

ಧಾರವಾಡ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯ, 8 ವಿಧಾನಸಭಾ ಮತಕ್ಷೇತ್ರಗಳಲ್ಲಿ, 85 ವರ್ಷ ಮೇಲ್ಪಟ್ಟ ಸಾವಿರದ 141 ಜನ ಹಿರಿಯ ನಾಗರಿಕರು, ಮತ್ತು 368 ವಿಶೇಷಚೇತನರು ಸೇರಿ, ಒಟ್ಟು ಸಾವಿರದ 509 ಜನ ಮತದಾರರು, ತಮ್ಮ ಮನೆಯಿಂದ ಮತ ಚಲಾಯಿಸಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ, ಕಳೆದ ಎರಡು ದಿನಗಳಲ್ಲಿ ಶೇಕಡ 96 ದಶಾಂಶ 5 ರಷ್ಟು ಮತದಾನವಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆಯ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಯಲಹಂಕದಲ್ಲಿ, 4 ಕೋಟಿ 80 ಲಕ್ಷ ರೂಪಾಯಿ ನಗದು ವಶ ಪಡಿಸಿಕೊಂಡಿದ್ದಾರೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕೋರಮಂಗಲದಲ್ಲಿ 18 ಲಕ್ಷ 82 ಸಾವಿರದ 267 ರೂಪಾಯಿ ನಗದು,

ಕೋಲಾರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ಬೇತಮಂಗಲದಲ್ಲಿ 47 ಲಕ್ಷ 56 ಸಾವಿರ ರೂಪಾಯಿ,

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ಕಾಳಿಸಿದ್ದನಹುಂಡಿ ಚೆಕ್ ಪೋಸ್ಟ್‌ನಲ್ಲಿ 81 ಲಕ್ಷ 90 ಸಾವಿರದ 900 ರೂಪಾಯಿ,

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ಚಾಮರಾಜಪೇಟೆಯ ರಾಯನ್ ವೃತ್ತದ ಚೆಕ್‌ಪೋಸ್ಟ್‌ನಲ್ಲಿ, 20 ಲಕ್ಷ ರೂಪಾಯಿ ಹಾಗೂ

ಉಡುಪಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕುಂದಾಪುರದಲ್ಲಿ 43 ಲಕ್ಷ 34 ಸಾವಿರದ 128 ರೂಪಾಯಿ ನಗದು ವಶ ಪಡಿಸಿಕೊಂಡಿದ್ದಾರೆ.

<><><>

ಸೋಮವಾರ 29ನೇ ತಾರೀಖಿನಿಂದ, ಮೇ 16ರ ವರೆಗೆ, ರಾಜ್ಯಾದ್ಯಂತ ದ್ವಿತೀಯ ಪಿ.ಯು.ಸಿ ಪೂರಕ ಪರೀಕ್ಷೆಗಳು ನಡೆಯಲಿವೆ. ಜಿಲ್ಲಾಡಳಿತಗಳು ಪೂರ್ವ ಸಿದ್ಧತೆ ಕೈಗೊಂಡಿರುವುದಾಗಿ, ನಮ್ಮ ಪ್ರತಿನಿಧಿಗಳು ವರದಿ ಮಾಡಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ; ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ, ಶೇಕಡ 69 ದಶಾಂಶ 2–3 ರಷ್ಟು ಮತದಾನ ದಾಖಲು.
- ಶೇಕಡ 81 ದಶಾಂಶ 4–8 ರಷ್ಟು ದಾಖಲೆ ಮತದಾನದೊಂದಿಗೆ, ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ, ಮತ್ತೆ ಮೊದಲ ಸ್ಥಾನದ ಗರಿಮೆ.
- ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ಉತ್ತರ ಕ್ಷೇತ್ರಗಳಲ್ಲಿ, ಮತದಾನ ಪ್ರಮಾಣದಲ್ಲಿ, ಅಲ್ಪ ಪ್ರಮಾಣದ ಕುಸಿತ.
- ಲೋಕಸಭೆ ಎರಡನೇ ಹಂತದ ಚುನಾವಣೆ; ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕೆ, ಪ್ರಧಾನಮಂತ್ರಿ ಇಂದು ರಾತ್ರಿ ಬೆಳಗಾವಿಗೆ ಆಗಮನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ